Village				*Extent* A.	G.	
Ankanahalli	...	Gomal part	...	505	00	
		,,	...	100	00	
		,,	...	35	00	
Kutugal	...	,,	...	85	00	'A' Block
		,,	...	100	00	
		,,	...	85	00	
Shanbhoganahalli	...	,,	...	82	00	'B' Block
Hallimala	...	,,	...	272	00	'C' Block
		3. *Kanakapura*				
Tippur	...	Gomal part	...	165	00	
Bommasandra	...	Kharab	...	306	00	
		,,	...	168	00	
Bijhally	...	Gomal	...	200	00	
		,,	...	305	00	
Uyyambally	...	Gomal part	...	180	00	
Kunnur	...	Kharab part	...	224	00	
		Gomal	...	626	04	
Kebbehally	...	Kharab part	...	191	10	
		,,	...	60	00	
Kutugale	...	Gomal	...	109	11	
Maryadayakanagudi	...	Kharab	...	95	00	
		4. *Channapatna.*				
Komanahalli	...	Gomal part	...	144	00	
Rangur	...	,,	...	200	00	
Deverahosahally	...	Korab	...	75	00	
Gomal	..	,,	...	204	00	
Kelegere	..	...	...	16	00	

Sri S. KARIAPPA.—I have no supplementaries.

Agriculture and Animal Husbandry Departments (Implementation of Dr. Coleman's recommendation).

Q.—254. Sri S. R. NAGAPPA SETTY (Shimoga).—

Will the Government be pleased to state :—

the steps taken by them to implement the recommendations of Dr. L. C. Coleman regarding the departments of Agriculture and Animal Husbandry ?

A.—Dr. R. NAGAN GOWDA (Minister for Agriculture).—

The Heads of Departments concerned have been requested to implement the recommendations accepted by Government. They are under several stages of implementation.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ಶಿಫಾರಸುಗಳಂತೆ ಯಾವಯಾವ ಇಲಾಖೆಗಳಲ್ಲಿ ಏನೇನು ಬದಲಾವಣೆಗಳಾಗಿವೆ ?

* ಡಾ॥ ಆರ್. ನಾಗನಗೌಡ.—Animal Husbandry ಇಲಾಖೆಯಲ್ಲಿ ಕೆಲವಾಗಿವೆ. Agricultural Department ನಲ್ಲಿ ಕೆಲವು changes ಆಗಿವೆ. ಇನ್ನೂ ಹಾಗೆಯೇ ಆಗುತ್ತಲೇ ಇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೂರು ಜನ ವ್ಯವಸಾಯದ ಅಸಿಸ್ಟೆಂಟ್ ಡೈರೆಕ್ಟರುಗಳು ಟ್ರೈನಿಂಗ್ ಇಲ್ಲದಿರುವವರು ಇದ್ದಾರೆ. ಬೇರೆಯವರು ಟ್ರೈನಿಂಗ್ ಆಗಿರುವವರನ್ನು ಹಾಕಿ ಎಂದು ಶಿಫಾರಸು ಮಾಡಿದ್ದಾರೆ. ಅದರಂತೆ ಟ್ರೈನಿಂಗ್ ಆಗಿರುವ ಅಸಿಸ್ಟೆಂಟ್ ಡೈರೆಕ್ಟರುಗಳನ್ನು post ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಇದರ ವಿಷಯವಾಗಿ ಡೈರೆಕ್ಟರವರು, 'ಹೀಗೆ ಮಾಡುವುದರಿಂದ ಬಹಳ ಕಷ್ಟವಾಗುತ್ತದೆ ; promotion ಮುಂತಾದುವುಗಳೆಲ್ಲಾ upset ಆಗುತ್ತವೆ, ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿ trained agricultural graduates ಗಳನ್ನು ನೇಮಕ ಮಾಡಿಲ್ಲವೆಂದು ಹೇಳಿದ್ದಾರೆ. ಅದನ್ನು ಜಾರಿಗೆ ತಂದಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ proposals ಕಳುಹಿಸಿದ್ದಾರೆ ; ಯೋಚನೆಮಾಡುತ್ತೇನೆ.

---

* Asterisk indicates that the remarks or speeches have not been revised by the Member concerned.

Sri Mulka GOVINDA REDDY.—Are the Government aware that Dr. Narayanaswamy Naidu, Director of Animal Husbandry, was deputed to Russia ?

Dr. R. NAGAN GOWDA.—Yes.

Sri Mulka GOVINDA REDDY.—I would like to know whether a copy of the report submitted by Dr. Naidu to the Government of India, has been sent to the Mysore Government ?

Mr. SPEAKER.—How does it arise out of this question ?

Sri Mulka GOVINDA REDDY.—I would like to know the proposals, if any, they are implementing regarding the Animal Husbandry Department ?

Dr. R. NAGAN GOWDA.—It does not arise.

Mr. SPEAKER.—I want to know whether there is a proposal from Dr. Coleman regarding the Animal Husbandry to depute Dr. Naidu to investigate.

Dr. R. NAGAN GOWDA.—Now, Sir, Dr. Coleman has made some recommendations regarding the Department of Agriculture and Animal Husbandry. Dr. Narayanaswamy the head of the Department of Animal Husbandry who went to Russia has submitted a report.

Sri Mulka GOVINDA REDDY.—May I know whether the report of Dr. Coleman is going to be in consonance with the report that has been submitted by Dr. Naidu ; or whether there are any conflicting recommendations regarding these departments, if so, the recommendations the Government of Mysore are going to adhere to ?

Dr. R. NAGAN GOWDA.—Dr. Coleman's recommendations were considered on their own merits and action has been taken on them.

ಶ್ರೀ ಬಿ ಎಕ್. ಬೋರಣ್ಣಗೌಡ.—ತಾವು ಹೇಳಿದಿರಿ, ಈ ಇಲಾಖೆಯಲ್ಲಿ ಮೂರು ಜನ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರುಗಳು technical men ಅಲ್ಲವೆಂದು ಹೇಳಿದಿರಿ. ಈ Technical Departmentಗೆ technical men ಹಾಕದಿರುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಅವರು Botany graduate ಗಳು ; ಬಹಳ ದಿವಸಗಳ ಹಿಂದೆ ನೇಮಕವಾಗಿರುವವರು. ವ್ಯವಸಾದ ಇಲಾಖೆಯಲ್ಲಿ ಬಹಳ ಕಾಲದಿಂದ ಕೆಲಸಮಾಡಿದ್ದಾರೆ. ಈಗ ಈ ಬಾಟನಿ ಗ್ರಾಜುಯೇಟ್‌ಗಳನ್ನು ರಿಸರ್ವ್ ಸೆಕ್ಷನ್‌ಗೆ ಹಾಕಿ ಅವರ ಸೀನಿಯಾರಿಟಿ ಪ್ರಕಾರ ಅವರಿಗೆ ಸ್ಥಾನ ಕೊಟ್ಟರೆ ಮಿಕ್ಕವರ seniority upset ಆಗುತ್ತದೆ. ಅಲ್ಲದೆ, ಅವರುಗಳು ಬಹಳ ವರ್ಷಗಳಿಂದ ಕೆಲಸ ಮಾಡಿರುವ ವರಾಗಿರುವುದರಿಂದ ಅನುಭವ ಪಡೆದಿದ್ದಾರೆಂದು ಡೈರೆಕ್ಟರವರು ಶಿಫಾರಸು ಕಳುಹಿಸಿದ್ದಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಆಗ agricultural graduate ಗಳು ಪ್ರತಿ ವರ್ಷವೂ ಬರುತ್ತಿರಲಿಲ್ಲವೆ ? ಅಂಥವರನ್ನು post ಮಾಡುವುದಕ್ಕೇನು ತೊಂದರೆಯಿತ್ತು ?

ಡಾ॥ ಆರ್. ನಾಗನಗೌಡ.—ಅವರನ್ನು post ಮಾಡಿದಾಗ agricultural graduate ಗಳು ಇದ್ದರೋ ಇಲ್ಲವೋ ಗೊತ್ತಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಡಾ॥ ಕೋಲ್ಮನ್‌ರವರು ಟ್ಯಾಕ್ಸರುಗಳನ್ನು ಉಪಯೋಗಿಸ ಕೂಡದು ಎಂದು ಹೇಳಿ ರಿಪೋರ್ಟ್ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ರಿಪೋರ್ಟ್‌ನಲ್ಲಿ ಆ recommendation ಇಲ್ಲ. ಟ್ಯಾಕ್ಸರ್ ವಿಷಯವಾಗಿ ಡಾ॥ ಕೋಲ್ಮನ್‌ರವರು ಏನೂ ಶಿಫಾರಸು ಮಾಡಿಲ್ಲವೆಂದು ಕಾಣುತ್ತದೆ ಆದರೆ ಕೋಲ್ಮನ್‌ರವರು ಕೆಲವು ಸ್ಥಳಗಳಲ್ಲಿ ಭಾಷಣ ಮಾಡುವಾಗ ಟ್ಯಾಕ್ಸರುಗಳ ವಿಷಯವಾಗಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಅಷ್ಟೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅವರ recommendation ಗಳನ್ನು ಸಭೆಯ ಮುಂದಿಡುತ್ತೀರಾ ?

Dr. R. NAGAN GOWDA.—It will be considered.

ಶ್ರೀ ಕೆ. ವಿ. ಬೈರೇಗೌಡ.—ಡಾ॥ ಕೋಲ್ಮನ್‌ರವರದಿ confidential ಏ? ಅಥವಾ ಅದನ್ನು public ಆಗಿ announce ಮಾಡಬಹುದೋ ?

Dr. R. NAGAN GOWDA.—It is not confidential as the Hon'ble Member has already got answers for a number of questions.

ಶ್ರೀ ಕೆ. ವಿ. ಬೈರೇಗೌಡ.—ಹಾಗಾದರೆ ಆ ವರದಿಯನ್ನು ಹಂಚುವುದಕ್ಕೇನು ತೊಂದರೆ ?

(No answer).

ಶ್ರೀ ಕೆ. ವಿ. ಬೈರೇಗೌಡ.—Non-technical ಜನರನ್ನು ಈ ಇಲಾಖೆಗೆ ತೆಗೆದುಕೊಳ್ಳುವಾಗ technical ಅರ್ಹತೆಯಿರುವವರು ಇರಲಿಲ್ಲವೆಂದು ಸರ್ಕಾರದವರ ಗಮನಕ್ಕೆ ಬಂದಿತ್ತೇ ?

Dr. R. NAGAN GOWDA.—Notice.

ಶ್ರೀ ಕೆ. ವಿ. ಬೈರೇಗೌಡ.—1945 ನೆಯ ಇಸವಿಯಲ್ಲಿ ತೆಗೆದು ಕೊಂಡಿರುವವರಿಗೆ seniority ಪ್ರಕಾರ promotion ಕೊಟ್ಟಿದ್ದೀರಾ ?

Dr. R. NAGAN GOWDA.—So far as I know, I think, we have given them promotion regularly in the line in which they have been working.

Mr. SPEAKER.—It goes far away from this question.

ಶ್ರೀ ಆರ್. ಅನಂತರಾಮು.—ಡಾ॥ ಕೋಲ್ಮನ್‌ರು ಅಗ್ರಿಕಲ್ಚರಲ್ ಇಲಾಖೆ ಮತ್ತು Animal Husbandry ಇಲಾಖೆ, ಇವೆರಡನ್ನೂ ಸೇರಿಸಿ ಎರಡಕ್ಕೂ ಒಬ್ಬರೇ ಡೈರೆಕ್ಟರವರನ್ನು ಮಾಡಬೇಕೆಂದು ಹೇಳಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಹೇಳಿದ್ದರು.

ಶ್ರೀ ಆರ್. ಅನಂತರಾಮ್.—ಅದನ್ನು ಮಾಡುವುದು ಸೂಕ್ತವಲ್ಲವೇ ?

ಡಾ॥ ಆರ್. ನಾಗನಗೌಡ.—ಈ ಸಂದರ್ಭದಲ್ಲಿ ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟಿದೆ.

"Crop Protection" Service.

Q.—403. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) how many applications were received in the Office of the Director of Agriculture for the service of "crop protection" especially garden and paddy crops that were subjected to scarcity of rainfall during 1954-55 ;

(*b*) what are the arrangements made to strengthen the work of the Agricultural Department in such cases ;

(*c*) whether the Department of Agriculture has not made provision for such unforeseen services ?

A.—Dr. R. NAGAN GOWDA (Ministre for Agriculture).—

(*a*) 1,026.

(*b*) and (*c*) Plant Protection Assistants and Fieldmen are specially appointed in all the Districts, who work under the supervision and guidance of the Assistant Directors of Agriculture, the Government Entomologist and Plant Pathologist. Necessary action is also being taken year after year to augment the stock of equipment and chemicals to the extent of Budget provision.

ಶ್ರೀ ಕೆ. ಪ್ರಭಾಕರ್.—1,026 ಅರ್ಜಿಗಳಲ್ಲಿ ಯಾವಯಾವ ತೊಂದರೆಗಳಿಗೆ ಸಂಬಂಧಪಟ್ಟ ಅರ್ಜಿಗಳು ಎಷ್ಟೆಷ್ಟಿದ್ದುವೆಂಬುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಇಷ್ಟು ದೊಡ್ಡ ಸಂಖ್ಯೆಯಿರುವಾಗ ಹೇಗೆ ಹೇಳುವುದು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಕೆ. ಪ್ರಭಾಕರ್.—ನೀರಿಲ್ಲದೆ ಬತ್ತದಬೆಳೆ ಒಣಗುತ್ತಿರುವಾಗ ಬತ್ತದ ಬೆಳೆಗೆ ಯಾವಯಾವ ರೋಗ ಬರುತ್ತದೆ ?

*ಡಾ॥ ಆರ್. ನಾಗನಗೌಡ.—ನೀರಿಲ್ಲದ ಕಾಲದಲ್ಲಿ ಬತ್ತದ ಬೆಳೆ ಒಣಗುತ್ತಾ ಬರುತ್ತದೆ. ಅದೇ ದೊಡ್ಡ ರೋಗ.

ಶ್ರೀ ಕೆ. ಪ್ರಭಾಕರ್.—ನೀರಿಲ್ಲದೆ ಒಣಗುವ ಹೈರಿಗೆ technical men ಸಹಾಯ ಮಾಡುತ್ತಾರೆಂದು ಹೇಳಿದ್ದೀರಿ. ಅವರೇನು ಸಹಾಯ ಮಾಡುತ್ತಾರೆ ?

ಡಾ॥ ಆರ್. ನಾಗನಗೌಡ.—ಮಳೆ ಕಡಮೆ ಯಾಗಿದ್ದರೆ ರಾಗಿ, ಜೋಳ ಆದರೆ inter-culture ಮಾಡುವುದರಿಂದ ಸ್ವಲ್ಪ ತಡೆಯುವುದಕ್ಕೆ ಸಾಧ್ಯವಾಗಬಹುದು. ಅಷ್ಟೇ ಹೊರತು, ಬೇರೆ ಯಾವ ರೀತಿಯಿಂದಲೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಯಾವ ಸಂದರ್ಭದಲ್ಲಿ ಏನು ಮಾಡಬೇಕೆಂದು ಹೇಳಿದರೆ ಪರಿಶೀಲನೆ ಮಾಡುತ್ತೇನೆ.

12-30 P.M.

ಶ್ರೀ ಕೆ. ಪ್ರಭಾಕರ್.—ಒಂದೆರಡು ಹದ ನೀರನ್ನು ಹಾಯಿಸಲು ಯತ್ನವಿಲ್ಲದಂತಾಗಿ ಅಲ್ಲಿಯ ನೂರಾರು ರೈತರು ಪಂಪ್‌ಸೆಟ್ಟುಗಳನ್ನಾದರೂ ಕೊಡಿ ಎಂದು ವ್ಯವಸಾಯದ ಇಲಾಖೆಗೆ ಅರ್ಜಿಹಾಕಿಕ್ಕೊಂಡಿದ್ದಕ್ಕೆ ಆ ಇಲಾಖೆಯವರು ಪಂಪ್‌ಸೆಟ್‌ಗಳು ಇಲ್ಲ ಎಂದು ಹೇಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—I suppose that also comes under crop protection and I may answer that. Is it diesel pump sets that you are asking about ?

Sri K. PRABHAKAR.—Any kind of arrangement that could be made available temporarily to protect the crop once or twice getting supply of water.

Dr. R. NAGAN GOWDA.—Whatever pump sets that are available, that is, oil engine pump sets, we readily give them to the cultivators, but we have not got a very large number of them.

ಶ್ರೀ ಕೆ. ಪ್ರಭಾಕರ್.—ಇಲ್ಲಿಯವರೆಗೆ ಆ ವ್ಯವಸಾಯದ ಇಲಾಖೆಯವರು ಸರಬರಾಯಿ ಮಾಡಿರತಕ್ಕಂಥ ಪಂಪ್ ಸೆಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅನ್ನುವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಕೆ. ಪ್ರಭಾಕರ್.—ಹೀಗೆ ಸಕಾಲಕ್ಕೆ ಸರಿಯಾಗಿ ಸರ್ಕಾರದಿಂದ ರೈತರಿಗೆ ಸೌಲಭ್ಯಗಳು ಯಾವವೂ ದೊರೆಯದೆ ಅವರಿಗೆ ಆಗಿಂದಾಗ್ಗೆ ಲಕ್ಷಾಂತರ ರೂಪಾಯಿಗಳ ನಷ್ಟ ಆಗುತ್ತಿರುವ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ವರೆಗೆ ನಾವೂ ಸಹ ಎಷ್ಟೋ ಪಂಪ್ ಸೆಟ್‌ಗಳನ್ನು ರೈತರಿಗೆ ಒದಗಿಸಿದ್ದೇವೆ. ಆದರೆ ಈಗ ಆ ಅಗ್ರಿಕಲ್‌ಚರಲ್ ಇಲಾಖೆಯಲ್ಲೇನೋ ಈ ಮೆಷಿನ್‌ಗಳು ಇಲ್ಲ ಎಂದು ತಿಳಿದು ಬಂದಿದೆ. ಆದಾಗ್ಯೂ ಪಿ.ಡಬ್ಲ್ಯು.ಡಿ.ಯಿಂದ ಮತ್ತು ಇತರ ಲೋಕಲ್ ಬಾಡೀಸ್‌ಗಳಲ್ಲಿ ಕೆಲವು ಪಂಪ್ ಸೆಟ್‌ಗಳಿವೆ. ಅವರನ್ನು ಕೇಳಿದರೆ ಯಾರೂ ಇಲ್ಲ ಎಂದು ಹೇಳುವುದಿಲ್ಲ. ಅವರು ಅನೇಕ ಸಂದರ್ಭಗಳಲ್ಲಿ ಈ ಬೆಂಗಳೂರು ಜಿಲ್ಲೆಗೆ ಕೊಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಸಕಾಲದಲ್ಲಿ ರೈತರಿಗೆ ಸಹಾಯ ನೀಡುವ ನಲುವಾಗಿ ಈ ವ್ಯವಸಾಯದ ಇಲಾಖೆಗೆ ಸಾಕಷ್ಟು ಪಂಪ್ ಸೆಟ್‌ಗಳನ್ನೊದಗಿಸುವಂಥ ಒಂದು ವ್ಯವಸ್ಥೆಯನ್ನು ತಾವು ಈಗಲಾದರೂ ಏರ್ಪಾಡು ಮಾಡುವಿರಾ ?

ಡಾ॥ ಆರ್. ನಾಗನಗೌಡ.—ಈಗಲೂ ಕೆಲವು ಸೆಟ್ಟುಗಳನಿಟ್ಟುಕೊಂಡಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಇರಬಹುದು, ಆದರೆ ಅವುಗಳೊಂದೂ ಸರಿಯಾಗಿ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಅವುಗಳೆಲ್ಲಾ ಕೆಟ್ಟುಹೋಗಿರುತ್ತವೆಂಬುದು ತಮ್ಮ ಅವಗಾಹನೆಗಿನ್ನೂ ಬಂದಿಲ್ಲವೇ ?